288(408) ಶ್ರೀಮತಿ. ನಾಗಮಣಿ.ಎಂ.ಕೆ(ಕಿರುಗಾವಲು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಂಜಾಪುರ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ ?

ಆ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು ;

ಇ) ಈ ಯೋಜನೆಯು ಇದುವರೆವಿಗೂ ಬಿಡುಗಡೆಯಾದ ಮೊತ್ತವೆಷ್ಟು ;

ಈ) ಈ ಯೋಜನೆಗೆ ಎಷ್ಟು ಹಣ ಬೇಕಾಗಿದೆ ಮತ್ತು ಯಾವಾಗ ಪೂರ್ಣಗೊಳ್ಳುವುದು ;

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ನಂಜಾಪುರ ಏತ ನೀರಾವರಿ ಯೋಜನೆಯ ಸಿವಿಲ್ ಕಾಮಗಾರಿಗಳಾದ ಪಂಪ್ ಹೌಸ್,ಸಂಪ್ ವೆಲ್ ಮತ್ತು ಡೆಲಿವರಿ ಸಿಸ್ಟಮ್ ಪೂರ್ಣಗೊಂಡಿರುತ್ತದೆ. ರೈಸಿಂಗ್ ಮೈನಿನ ಒಟ್ಟು 17,000 ಮೀ.ನಲ್ಲಿ 11.310 ಮೀ. ಪೂರ್ಣಗೊಂಡಿರುತ್ತದೆ. ಉಳಿಕೆ ರೈಸಿಂಗ್ ಮೈನಿನ ಕಾಮಗಾರಿ, ಸಬ್ ಸ್ಟೇಷನ್ ಮತ್ತು ಕನ್ಟ್ರೋಲ್ ರೂಂ ಕೆಲಸಗಳು ಪ್ರಗತಿಯಲ್ಲಿದೆ. ಪಂಪ್ ಮತ್ತು ಮೋಟರುಗಳು ಸರಬರಾಜಾಗಿದ್ದು, ಜೋಡಣೆ ಕಾರ್ಯ ಪ್ರಗತಿಯಲ್ಲಿದೆ. ರೆಗ್ಯೂಲೇಟರ್/ರಸ್ತೆ ಸೇತುವೆ ಹಾಗೂ ತುರುಗನೂರು ನಾಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣ ಗೊಂಡಿದೆ.

ಆ) ಈ ಯೋಜನೆಯ ಅಂದಾಜು ವೆಚ್ಚ ರೂ. 3160.00 ಲಕ್ಷಗಳಾಗಿರುತ್ತದೆ.

ಇ) ಈ ಯೋಜನೆಗೆ ಇದುವರೆವಿಗೂ ರೂ. 1553.59 ಲಕ್ಷಗಳು ಬಿಡುಗಡೆಯಾಗಿರುತ್ತದೆ.

ಈ) ಈ ಯೋಜನೆಯನ್ನು ಪೂರ್ಣಗೊಳಿಸಲು ರೂ. 1606.41 ಲಕ್ಷಗಳು ಬೇಕಾಗಿದೆ ಮತ್ತು ಈ ಯೋಜನೆಯನ್ನು ಜೂನ್ 2005ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

290(422) ಶ್ರೀಮತಿ ನಾಗಮಣಿ ಎಂ.ಕೆ(ಕಿರುಗಾವಲು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಡ್ಯ ಜಿಲ್ಲೆಯ ಕಿರುಗಾವಲಿನ ವಿಧಾನಸಭಾ ಕ್ಷೇತ್ರದಲ್ಲಿನ ಗ್ರಾಮಗಳಿಗೆ ಬಸ್ಸಿನ ಸೌಕರ್ಯ ಕಲ್ಪಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇದರಿಂದ, ಸಾರ್ವಜನಿಕರಿಗೆ ಮತ್ತು ಶಾಲಾ ಮಕ್ಕಳಿಗೆ ಬಹಳ ಅನಾನುಕೂಲ-ವಾಗುತ್ತಿರುವುದು ನಿಜವಲ್ಲವೇ ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳಲಾಗುವ ಕ್ರಮಗಳೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

291(465) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) ಮಾನ್ಯ ಪೌರಾಡಳಿತ ಹಾಗೂ ಕಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಗರಸಭೆ ಹಾಗೂ ಪುರಸಭೆಗಳಲ್ಲಿ ಸಾಕಷ್ಟು ಪೌರ ಕಾರ್ಮಿಕ ಸಿಬ್ಬಂದಿ ಇಲ್ಲದೆ ಕೆಲಸ ಕಾರ್ಯಗಳಿಗೆ ತೊಂದರೆಯಾಗಿದೆ ಎಂಬ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ :